ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಪಿ. ಸಂದೇಶ್

ಮೆ || ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಅಮಿಟೆಡ್ -ವಿರುದ್ಧ ಮುಖ್ಯ ನಿರ್ದೇಶಕರು (ಸಕ್ಕರೆ) ಕೃಷಿ ಭವನ, ನ್ಯೂಡೆಲ್ಲಿ ಭಾರತ ಸರ್ಕಾರ ಮತ್ತು ಇತರರು

ರಿಟ್ ಅರ್ಜಿ ಸಂ. 81673/2013 (ಜಿಎಂ-ಆರ್ಇಎಸ್) ದಿನಾಂಕ 15 ನೇ ಮಾರ್ಚ್, 2019 ಕರ್ನಾಟಕ ತೀರ್ಪುಗಳ ವರದಿ 2020

ಆಜ್ಞೆ

ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್:

ಅರ್ಜಿದಾರರು ಹಾಗೂ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿರುತ್ತೇವೆ.

2. ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದೊಂದಿಗೆ ಓದಲಾದ ಸಂವಿಧಾನದ 226 ಹಾಗೂ 227 ನೇ ಅನುಚ್ಛೇದಗಳನ್ನು ಅನ್ವಯಿಸುವ ಮೂಲಕ ಇಲ್ಲಿನ ಪ್ರತ್ಯರ್ಜಿದಾರ ಸಂ .1 ಹೊರಡಿಸಿದ ಅನುಬಂಧ-ಕೆ ಮೇರೆಗೆ ಅರ್ಜಿದಾರರ ವಿರುದ್ಧದ ದಂಡನೆಯ ರೂಪದ ಕ್ರಮಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಸಂ.4-12 ( 1)/2000/ಎಸ್ II/219 ರಲ್ಲಿ 10.04.2013 ರ ಆದೇಶವನ್ನು ರದ್ದುಪಡಿಸುವ ಮೂಲಕ ಸರ್ಷಿಯೋರರಿ ಸ್ವರೂಪದ ಅಥವಾ ಯಾವುದೇ ಇತರ ಸಮುಚಿತ ರಿಟ್ ಅಥವಾ ನಿರ್ದೇಶನವನ್ನು ನೀಡದಂತೆ ಆದೇಶಿಸುವುದಕ್ಕೆ ಕೋರಿರುತ್ತಾರೆ.ಮುಂದುವರೆದು, ಇಲ್ಲಿನ ಪ್ರತ್ಯರ್ಜಿದಾರ ಸಂ .5 ನೀಡಿದ ಅನುಬಂಧ-ಎಲ್ ಮೇರೆಗೆ 03.05.2013 ರಂದಿನ ಫಿರ್ಯಾದನ್ನು ಹಾಗೂ ಅನುಬಂಧ-ಎಂ ಪ್ರಕಾರ 03.05.2013 ರಂದು ಪಿಎಸ್ ಅಪರಾಧ ಸಂ .112/2013 ರಲ್ಲಿನ ಪ್ರಥಮ ಮಾಹಿತಿ ವರದಿಯನ್ನು ರದ್ದುಪಡಿಸುವ ಸರ್ಷಿಯೋರರಿ ಸ್ವರೂಪದಲ್ಲಿನ ರಿಟ್ ಅಥವಾ ಯಾವುದೇ ಇತರ ಯುಕ್ತ ರಿಟ್ ಅಥವಾ ಆದೇಶ ಅಥವಾ ನಿರ್ದೇಶನವನ್ನು ನೀಡುವಂತೆ ಆದೇಶಿಸುವುದಕ್ಕೆ ಕೋರಿರುತ್ತಾರೆ ಹಾಗೂ ಅನುಬಂಧ-ಜೆ ಮೇರೆಗೆ 14.05.2013 ರ ಪತ್ರದ ಮೂಲಕ ಹಾಗೂ ಅನುಬಂಧ-ಎನ್ ಮೇರೆಗೆ 05.05.2013 ರ ಪತ್ರದ ಮೂಲಕ ಅರ್ಜಿದಾರನು ಸಿದ್ಧಪಡಿಸಿದ ಮನವಿಯ ಮೇರೆಗೆ ವಿಷಯವನ್ನು ಮರುಪರಿಗಣಿಸಲು ಪ್ರತ್ಯರ್ಜಿದಾರ ಸಂ .1 ಹಾಗೂ 2 ನ್ನು ನಿರ್ದೇಶಿಸುವ ಮೂಲಕ ಮ್ಯಾಂಡಮಸ್ ಸ್ವರೂಪದ ರಿಟ್ ಅಥವಾ ಯಾವುದೇ ಇತರೆ ಸೂಕ್ತ ಆದೇಶ ಅಥವಾ ನಿರ್ದೇಶನದಲ್ಲಿ ರಿಟ್ ಹೊರಡಿಸುವಂತೆ ಅರ್ಜಿದಾರ ಸಕ್ಕರೆ ಕಾರ್ಖಾನೆಯ ವಿರುದ್ಧ ದಂಡನೆಯ ರೂಪದ ಕ್ರಮದ ನಿಬಂಧನೆಯನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯರ್ಜಿದಾರ ಸಂ .1 ಹಾಗೂ 2 ನೀಡಿದ ನಿರ್ದೇಶನಗಳನ್ನು ತಿಳಿಸಲು ಹಾಗೂ ಅನುಬಂಧ-ಆರ್ ಮೇರೆಗೆ 13.08.2013 ನೇ ದಿನಾಂಕದ ಮರು ನಿವೇದನೆಯನ್ನು ಪರಿಗಣಿಸಲು ಪ್ರತ್ಯರ್ಜಿದಾರ ಸಂ .3 ರಿಂದ 5 ರ ವರೆಗಿನ ಪ್ರತ್ಯರ್ಜಿದಾರರನ್ನು ನಿರ್ದೇಶಿಸುವ ಮೂಲಕ ಮ್ಯಾಂಡಮಸ್ ಸ್ವರೂಪದಲ್ಲಿನ ರಿಟ್ ಅಥವಾ ಯಾವುದೇ ಇತರ ಸೂಕ್ತ ಆದೇಶ ಅಥವಾ ನಿರ್ದೇಶನ ನೀಡುವಂತೆ ಆದೇಶಿಸಲು ಕೋರಿರುತ್ತಾರೆ.

3. ಅರ್ಜಿದಾರ ಕಂಪನಿಯು, ಕ ಂ ಪನಿಗಳ ಅಧಿನಿಯಮ, 1956 ರಡಿಯಲ್ಲಿ ನಿಗಮಿತವಾದ ಒಂದು ಕಂಪನಿಯಾಗಿದ್ದು, ಬೆಳಗಾವಿ ಜಿಲ್ಲೆಯ, ಚಿಕ್ಕೋಡಿ ತಾಲೂಕಿನ, ಬೆಡ್ಕಿಹಾಳ ಗ್ರಾಮದಲ್ಲಿ ಸ್ಥಾಪಿಸಲಾದ ಸಕ್ಕರೆ ಕಾರ್ಖಾನೆಯಾಗಿರುತ್ತದೆ.ಸದರಿ ಸಕ್ಕರೆ ಸ್ಥಾವರವು ಮೆ || ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿಮಿಟೆಡ್ (ಸಕ್ಕರೆ ಕಾರ್ಖಾನೆ) ಎಂಬ ಹೆಸರಿನದಾಗಿದೆ.ಇಲ್ಲಿನ ಪ್ರತ್ಯರ್ಜಿದಾರ ಸಂ .1 ಹಾಗೂ 2, ಯಾವುದೇ ಅವಶ್ಯಕ ಸರಕುಗಳ ಸಂಬಂಧದಲ್ಲಿ ಉತ್ಪಾದನೆ, ನಿಯಂತ್ರಣ, ಪೂರೈಕೆ, ವಿತರಣೆ ಮುಂತಾದವುಗಳ ಸಂಬಂಧದಲ್ಲಿ ನಿರ್ದೇಶನ ನೀಡಲು ಅವಶ್ಯಕ ಸರಕುಗಳ ಅಧಿನಿಯಮ, 1955 (ಇನ್ನೂ ಮುಂದೆ " ಅಧಿನಿಯಮ ' ಎಂದು ಉಲ್ಲೇಖಿಸಲಾಗಿರುತ್ತದೆ) ದ 3 ನೇ ಪ್ರಕರಣದಡಿಯಲ್ಲಿ ಅಧಿಕಾರವನ್ನು ಪಡೆದ ಪ್ರಾಧಿಕಾರಿಗಳಾಗಿರುತ್ತಾರೆ.ಅಧಿನಿಯಮದ 3 ನೇ ಪ್ರಕರಣದ ಅನುಸರಣೆಯಲ್ಲಿ, ಕೇಂದ್ರ ಸರ್ಕಾರವು ಸಕ್ಕರೆ (ನಿಯಂತ್ರಣ) ಆದೇಶ, 1966 ಹಾಗೂ ಲೆವಿ ಸಕ್ಕರೆ ಸರಬರಾಜು (ನಿಯಂತ್ರಣ) ಆದೇಶ, 1979 (ಇನ್ನು ಮುಂದೆ,

ಅನುಕ್ರಮವಾಗಿ ' ನಿಯಂತ್ರಣಾದೇಶ ' ಹಾಗೂ ' ಲೆವಿ ಆದೇಶ ' ಎಂದು ಉಲ್ಲೇಖಿಸಲಾಗಿರುತ್ತದೆನ್ನು ಹೊರಡಿಸಿರುತ್ತದೆ.

4. ಲೆವಿ ಸಕ್ಕರೆ ಸರಬರಾಜು (ನಿಯಂತ್ರಣ) ಆದೇಶ, 1979 ರ ಮೇರೆಗೆ (ತರುವಾಯ ಇದನ್ನು ಲೆವಿ ಆದೇಶವೆಂದು ಉಲ್ಲೇಖಿಸಲಾಗಿರುತ್ತದೆ) ಉತ್ಪಾದನೆಯ ಶೇ .10 ರಷ್ಟನ್ನು ಲೆವಿ ಸಕ್ಕರೆಗೆ ಮೀಸಲಿರಿಸಬೇಕಾಗಿದ್ದಲ್ಲಿ, ಉಳಿದ ಸಕ್ಕರೆ ದಾಸ್ತಾನಿನ ಶೇ .90 ರಷ್ಟು, ಈ ಮೊದಲು ಉತ್ಪಾದನೆಯ ಶೇ .20 ರಷ್ಟಿದ್ದುದರಿಂದ, ಈ ಸಕ್ಕರೆ ಅಧಿವೇಶನದ ನಂತರದಿಂದ ಮಾರಾಟದ ಸಕ್ಕರೆಯು ಮುಕ್ತವಾಗಿರುತ್ತದೆ.ಇದನ್ನು 2011-12 ರ ಅಧಿವೇಶನಕ್ಕೆ ಶೇ .10 ರಷ್ಟೆಂದು ಮಾಡಿರುವ ಲೆವಿ ಆದೇಶದ ಪ್ರತಿಯನ್ನು ಅನುಬಂಧ- ಎ ಯ ಂ ತೆ ಹಾಜರುಪಡಿಸಿ ಗುರುತುಮಾಡಲಾಗಿರುತ್ತದೆ.2012-11) ನೇ ಸಕ್ಕರೆ ಅಧಿವೇಶನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಸಕ್ಕರೆ ಮಿಲ್ಲುಗಳ ಮೇಲೆ ಲೆವಿ ಹೊಣೆಗಾರಿಕೆಯನ್ನು ಹಂಚಿಕೆಯಾಗಿರುತ್ತದೆ.ಭಾರತ ಸರ್ಕಾರವು ಲೆವಿ ಹೊಣೆಗಾರಿಕೆಯನ್ನು ಹಂಚಿರುವ ವಿಧಿಸಿರುವಿಕೆಗಳಿಗೆ ಸಂಬಂಧಿಸಿದಂತೆ ಪ್ರತ್ಯರ್ಜಿದಾರ ಸಂ .1 ರವರ ಮೂಲಕ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.ಹಾಗೂ ಇದನ್ನು ಸಂಬಂಧಪಟ್ಟ ಸಕ್ಕರೆ ಮಿಲ್ಲುಗಳ ಸಂಘಗಳಿಗೆ ತಿಳಿಸಲಾಗಿರುತ್ತದೆ.ದಿನಾಂಕ: 17.04.2013 ರ ಸದರಿ ಮಾಹಿತಿಯ ಪ್ರತಿಯನ್ನು ಅನುಬಂಧ-ಬಿ ಎಂದು ಅಲ್ಲದೆ, ದಿನಾಂಕ 02.05.2013 ರ ಗೆಜೆಟ್ ಅಧಿಸೂಚನೆಯನ್ನು ಅನುಬಂಧ-ಸಿ ಎಂದು ಗುರುತುಮಾಡಿ ಹಾಜರುಪಡಿಸಲಾಗಿರುತ್ತದೆ.ಮುಂದುವರೆದು, ಅರ್ಜಿದಾರ-ಸಕ್ಕರೆ ಕಾರ್ಖಾನೆಯು, ಪ್ರತ್ಯರ್ಜಿದಾರ 1 ಹಾಗೂ 2 ವಹಿಸಲಾದಂತೆ ಸಾಗಣೆದಾರನಿಗೆ ಲೆವಿ ಹೊಣೆಗಾರಿಕೆ ಕೋಟಾ ವಿತರಿಸಿರುತ್ತದೆಂದೆ ವಾದಿಸಿ, ದಿನಾಂಕ 26.02.2013 ಪತ್ರದ ಪ್ರತಿಯನ್ನು ಅನುಬಂಧ-ಡಿ ಎಂದು ಅನುಬಂಧಿಸಲಾಗಿರುತ್ತದೆ.ಅರ್ಜಿದಾರ ಕಾರ್ಖಾನೆಯು ಪತ್ರದಲ್ಲಿ ಹೇಳಿರುವ ಮಟ್ಟಿಗೆ ಲೇವಿ ಪ್ರಮಾಣದ ಲಭ್ಯತೆಗೆ ಸಂಬಂಧಿಸಿದಂತೆ ದಿನಾಂಕ 18.04.2013 ರಂದಿನ ಪತ್ರದ ಮೂಲಕ ಸಾಗಣೆದಾರನಿಗೆ ಮಾಹಿತಿ ನೀಡಿರುತ್ತದೆ.ಹಾಗಾಗಿ, ಅರ್ಜಿದಾರ ಕಾರ್ಖಾನೆಯು 2011-12ನೇ ಸಾಲಿನ ಉತ್ಪಾದನೆಗೆ ಸಂಬಂಧಿಸಿದಂತೆ ಲೆವಿ ಪ್ರಮಾಣದ ಲಭ್ಯತೆಯ 10,500 ಕ್ವಿಂಟಾಲ್ ಮಟ್ಟಿಗಿರುತ್ತದೆಂದು ಸಾಗಣೆದಾರ ಆಂಧ್ರ ಪ್ರದೇಶ ಸರ್ಕಾರಕ್ಕೆ ಮಾಹಿತಿ ನೀಡುತ್ತಿರುತ್ತದೆ.ಶೇ .10 ರಷ್ಟು ಲೆವಿ ಹೊಣೆಗಾರಿಕೆಯಲ್ಲಿ ಇತರೆ ಸಾಗಣೆದಾರರು ಸಾಗಿಸುತ್ತಿದ್ದು, ಈ ಪ್ರಮಾಣದ ಲಭ್ಯತೆಗೆ ಸಂಬಂಧಿಸಿದಂತೆ ದೂರವಾಣಿ ಮೂಲಕ ಇಲ್ಲಿನ ಸದರಿ ಸಾಗಣೆದಾರರಿಗೆ ಅರ್ಜಿದಾರ ಕಾರ್ಖಾನೆಯು ತಿಳಿಸಿರುತ್ತದೆ.ದಿನಾಂಕ 18.04.2013 ರ ಸದರಿ ಪತ್ರದ ಪ್ರತಿಯನ್ನು ಅನುಬಂಧ- ಇ ಎಂದು ಹಾಜರುಪಡಿಸಿ, ಗುರುತು ಮಾಡಲಾಗಿರುತ್ತದೆ.ಆದಾಗ್ಯೂ, ಆಂಧ್ರಪ್ರದೇಶ ಸರ್ಕಾರವು, ಸಕ್ಕರೆ ಮಿಲ್ಲುಗಳು ತಮಗೆ ಹ ಂ ಚಿಕೆ ಮಾಡಿರುವ ಲೆವಿ ಕೋಟಾವನ್ನು ಖಚಿತಪಡಿಸಿರುವುದಿಲ್ಲವೆಂದೂ, ಇದರಲ್ಲಿ ಅರ್ಜಿದಾರ ಸಕ್ಕರೆ ಕಾರ್ಖಾನೆಯ ಹೆಸರನ್ನು ಹಂಚಿಕೆ ಮಾಡಲಾದ ಕೋಟಾದ ಒಟ್ಟಾರೆ ಪ್ರಮಾಣದ ಸಂಬಂಧದಲ್ಲಿ ನಮೂದಿಸಲಾಗಿರುತ್ತದೆಂದೂ, ತಮಗೆ ಹಂಚಿಕೆ ಮಾಡಲಾದ ಲೆವಿ ಕೋಟಾದ ಅಲಭ್ಯತೆಗೆ ಸಂಬಂಧಿಸಿದಂತೆ ಮಾಹಿತಿ ನೀಡಿರುತ್ತದೆ.ದಿನಾಂಕ 26.03.2013 ರ ಸದರಿ ಮಾಹಿತಿಯ ಪ್ರತಿಯನ್ನು ಹಾಜರುಪಡಿಸಿ ಅನುಬಂಧ-ಎಫ್ ಎಂದು ಗುರುತುಮಾಡಲಾಗಿರುತ್ತದೆ.ಸದರಿ ಸಾಗಣೆದಾರನು 2013 ಏಪ್ರಿಲ್ ತಿಂಗಳಲ್ಲೇ ಲೆವಿ ಸಕ್ಕರೆ ಕೋಟಾವನ್ನು ಸಾಗಿಸಿದ್ದು, ಇದನ್ನು ದಿನಾಂಕ 13.05.2013 ರ ಆದೇಶದ ಮೇರೆಗೆ ಅನುಬಂಧ-ಜಿ ಪ್ರಕಾರ ಅರ್ಜಿದಾರರು ಬಿಡುಗಡೆಗೊಳಿಸಿರುತ್ತಾರೆ.

5. ಲೆವಿ ಹೊಣೆಗಾರಿಕೆಯನ್ನು ಈಗಾಗಲೇ ಸಾಗಣೆದಾರನು ಸಾಗಿಸಿದ್ದು, ಸದರಿ ಪ್ರತಿಯನ್ನು ಅನುಬಂಧ-ಎಚ್ ಎಂದು ಹಾಜರುಪಡಿಸಿದ್ದು, ಆಂಧ್ರ ಪ್ರದೇಶ ಸರ್ಕಾರ ಕೋರಿಕೆ ಮೇರೆಗೆ ಪ್ರತ್ಯರ್ಜಿದಾರ ಸಂ .1 ಹಾಗೂ 2, ಲೇವಿಯ ಪ್ರಮಾಣದ ಲಭ್ಯತೆಯು 2011-12ನೇ ವರ್ಷದಲ್ಲಿ ಅಲಭ್ಯವಾಗಿರುವುದರಿಂದ 2011-12 ರಿಂದ 2012-13ನೇ ಉತ್ಪಾದನಾ ಅವಧಿಗೆ ಸಂಬಂಧಿಸಿದಂತೆ ಲೇವಿಯ ಹೊಣೆಗಾರಿಕೆಯನ್ನು ಮಾರ್ಪಾಡುಗೊಳಿಸಲಾಗಿದೆ.ಪ್ರತ್ಯರ್ಜಿದಾರ 1 ಹಾಗೂ 2 ಲೆವಿ ದಾಸ್ತಾನಿನ ಆದೇಶವನ್ನು ಮಾರ್ಪಾಡು ಮಾಡಿದ್ದು, ಸದರಿ ವಿಷಯವನ್ನು ಅವರಿಂದ ಅರ್ಜಿದಾರರಿಗೆ ತಿಳಿದುಬಂದಿರುವುದಿಲ್ಲ.ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅವರು ಲೆವಿ ಸಕ್ಕರೆಯನ್ನು ಸಾಗಿಸಲು ಆರಂಭಿಸಿದಾಗಷ್ಟೆ ಅರ್ಜಿದಾರ ಹಾಗೂ ಸಾಗಣೆದಾರರ ಗಮನಕ್ಕೆ ಇದು ಬಂದಿರುತ್ತದೆ.ಅನುಬಂಧ-ಎಫ್ ಸಾಗಣೆದಾರನ ಮಾಹಿತಿಯನ್ನು ಪರಿಗಣಿಸಿ, ಪ್ರತ್ಯರ್ಜಿದಾರ ಸಂ .1 ಹಾಗೂ 2 ಸಾಗಣೆದಾರನಿಗೆ ಅರ್ಜಿದಾರನು ಲೆವಿ ಸಕ್ಕರೆಯ ತರುವಾಯದ ರವಾನೆ ಬಿಡುಗಡೆಯನ್ನು ಪರಿಶೀಲಿಸಿರುವುದಿಲ್ಲ.ಹಾಗಾಗಿ, ಅನುಬಂಧ-ಕೆ ಮೇರೆಗೆ ದಿನಾಂಕ 10.04.2013 ರ ದೂರಿನ ಮೇರೆಗೆ ಈ ಅರ್ಜಿದಾರರ ವಿರುದ್ಧದ ವ್ಯವಹರಣೆಗಳನ್ನು ಆರಂಭಿಸಲಾಗಿರುತ್ತದೆ.ಅಲ್ಲದೆ ಅಧಿನಿಯಮದ 7 ನೇ ಪ್ರಕರಣದಡಿಯಲ್ಲಿ ಅರ್ಜಿದಾರನ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದಿರಲು ಅಥವಾ ಪ್ರಥಮ ಮಾಹಿತಿ ವರದಿಯನ್ನು ನೋಂದಣಿ ಮಾಡದಿರಲು ಕೋರಿಕೆ ಸಲ್ಲಿಸಿರುವುದಿಲ್ಲ.ಹಾಗಾಗಿ, ಅನುಬಂಧ-ಎಲ್ ಮೇರೆಗೆ

ಪ್ರತ್ಯರ್ಜಿದಾರನು, ಅರ್ಜಿದಾರ ಸಕ್ಕರೆ ಕಾರ್ಖಾನೆಯ ವಿರುದ್ಧ ದೂರನ್ನು ಸಲ್ಲಿಸಿರುತ್ತಾನೆ ಹಾಗೂ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸಿರುತ್ತಾನೆ ಹಾಗೂ ಇದನ್ನು ಅನುಬಂಧ- ' ಎಂ ' ಎಂದು ಗುರುತು ಮಾಡಲಾಗಿರುತ್ತದೆ.ಆ ತರುವಾಯ, ಮನವಿಯನ್ನು ಅನುಬಂಧ-ಎನ್ ಮೇರೆಗೆ ದಿನಾಂಕ 26.04.2013 ರಂದು ಸಲ್ಲಿಸಲಾಗಿರುತ್ತದೆ.ಅಲ್ಲದೆ, ಅರ್ಜಿದಾರನ ವಿರುದ್ಧ ಕ್ರಮವನ್ನು ಆರಂಭಿಸಬೇಕೆಂದು ಕೋರಿದಾಗ, ಅನುಬಂಧ-ಎನ್ ರ ಮೇರೆಗೆ ಯಾವುದೇ ದಂಡನೀಯ ಕ್ರಮವನ್ನು ತೆಗೆದುಕೊಳ್ಳದಿರಲು ಪ್ರತ್ಯರ್ಜಿದಾರ ಸಂ .2 ಕೋರಲಾಗಿರುತ್ತದೆ.

6. ಲೆವಿ ಹೊಣೆಗಾರಿಕೆಗೆ ಸಂಬಂಧಿಸಿದಂತೆ ನೀಡಲಾದ ವಿವರಣೆ ಕುರಿತಂತೆ ಅರ್ಜಿದಾರರ ಕೋರಿಕೆಯ ಮೇರೆಗೆ ಅಂಥ ವಾಸ್ತವಾಂಶಗಳನ್ನು ಪರಿಗಣಿಸಿ, ಪತ್ಯರ್ಜಿದಾರ ಸಂ .1, ತಮ್ಮಿಂದ ಮುಂದಿನ ನಿರ್ದೇಶನ ಬರುವವರೆಗೂ ಅರ್ಜಿದಾರ ಸಕ್ಕರೆ ಗಿರಣಿಯನ್ನು ಸ್ಥಗಿತಗೊಳಿಸಿರುವುದರ ವಿರುದ್ಧದ ದಂಡನೀಯ ಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲಾ ದಂಡಾಧಿಕಾರಿ/ಪ್ರತ್ಯರ್ಜಿದಾರ ಸಂ .3 ರವರಿಗೆ ಮಾಹಿತಿ ನೀಡಿ, ಜಿಲ್ಲಾಧಿಕಾರಿಗಳಿಗೆ ಯಾವುದೇ ದಂಡನೀಯ ಕ್ರಮ ತೆಗೆದುಕೊಳ್ಳದಿರುವಂತೆ ಹಾಗೂ ನಂತರದ ನಿರ್ದೇಶನದವರೆಗೂ ಅದನ್ನು ಸ್ಥಗಿತತೆಯಲ್ಲಿಯೇ ಇಟ್ಟಿರಬೇಕೆಂದೂ ಸಹ ಸೂಚಿಸಿರುತ್ತಾರೆಂಬುದು ಮತ್ತೊಂದು ವಾದವಾಗಿರುತ್ತೆ.ಸದರಿ ಮಾಹಿತಿಯನ್ನು ಅನುಬಂಧ-ಪಿ ಎಂದು ಹಾಜರುಪಡಿಸಲಾಗಿರುತ್ತದೆ.ಸಾಗಣೆದಾರ-ಆಂಧ್ರ ಪ್ರದೇಶ ಸರ್ಕಾರವು ಹಂಚಿಕೆ ಮಾಡಲಾದ ಸಕ್ಕರೆಯನ್ನು ಈಗಾಗಲೇ ಸಾಗಣೆ ಮಾಡಿದ್ದು, ಇದಕ್ಕೆ ಮೊದಲು, ಇದು ಲೆವಿ ಸಕ್ಕರೆಯ ಸಾಗಣೆಯನ್ನು ಕುರಿತಂತೆ ಅದನ್ನು ತಲುಪಿಸಬೇಕಾದ ಸ್ಥಳವನ್ನು ಅಂತಿಮಗೊಳಿಸಲಾಗಿರುತ್ತೆ.ಈ ಆದೇಶದಲ್ಲಿ ಅರ್ಜಿದಾರ ಸಕ್ಕರೆ ಕಾರ್ಖಾನೆಯಿಂದ ಸಾಗಿಸಲಾದ ಲೆವಿ ಸಕ್ಕರೆಯನ್ನು ಉಲ್ಲೇಖಿಸಲಾಗಿರುತ್ತದೆ.ಇದನ್ನು ಅನುಬಂಧ-ಕ್ಯೂ ಎಂದು ಹಾಜರುಪಡಿಸಲಾಗಿರುತ್ತದೆ.

7. ಅರ್ಜಿದಾರ-ಸಕ್ಕರೆ ಕಾರ್ಖಾನೆ ವಿರುದ್ಧ ಪ್ರತ್ಯರ್ಜಿದಾರ ಸಂ .1 ಸ್ಥಗಿತತೆಯಲ್ಲಿಟ್ಟು ದಂಡನೀಯ ಕ್ರಮವನ್ನು ಆರಂಭಿಸಿರುವುದರಿಂದ ಪ್ರತ್ಯರ್ಜಿದಾರರ ಕ್ರಮವು ಕಾನೂನು ಬಾಹಿರವು ಹಾಗೂ ದೋಷಪೂರ್ವವೂ ಆಗಿದೆಯೆಂಬುದು ಅರ್ಜಿದಾರರ ವಾದವಾಗಿದ್ದು, ಇದನ್ನು ಪ್ರತ್ಯರ್ಜಿದಾರ ಸಂ .3 ಕ್ಕೆ ಈಗಾಗಲೇ ತಿಳಿಸಿದ್ದಾಗ್ಯೂ, ದಂಡನೀಯ ಕ್ರಮವನ್ನು ಅರ್ಜಿದಾರರ ವಿರುದ್ಧ ಆರಂಭಿಸಿರುತ್ತಾರೆ.ಹಾಗಾಗಿ, ಅನುಬಂಧ-ಕೆ ಯಲ್ಲಿ ಪ್ರಶ್ನಿತ ಆದೇಶವಿದ್ದು, ಪ್ರತ್ಯರ್ಜಿದಾರ ಸಂ .4 ಹಾಗೂ 5 ರವರುಗಳು ದೂರನ್ನು ನೋಂದಣಿ ಮಾಡಿರುವುದು ಹಾಗೂ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಿರುವುದು ಕಾನೂನು ಬಾಹಿರವೂ, ನಿರಂಕುಶವೂ ಹಾಗೂ ಸಂಪೂರ್ಣವಾಗಿ ಅಧಿಕಾರವ್ಯಾಪ್ತಿಯನ್ನು ಮೀರಿರುವುದು ಆಗಿರುತ್ತದೆಂದೂ ವಾದಿಸಿರುತ್ತಾರೆ.ಅನುಬಂಧ-ಡಿ ಮೇರೆಗೆ ಅರ್ಜಿದಾರನ ಮೇಲೆ ವಿಧಿಸಿದ ಲೆವಿ ಹೊಣೆಗಾರಿಕೆಯನ್ನು 01.03.2013 ರಿಂದ ಆರಂಭಿಸಿ 31.05.2013 ರಷ್ಟರಲ್ಲಿ ಪೂರ್ಣಗೊಳಿಸತಕ್ಕದ್ದಾಗಿರುತ್ತದೆ.ಆದರೆ ಈ ಅವಧಿಯು ಪೂರ್ಣಗೊಳ್ಳುವ ಮೊದಲೇ, ಕ್ರಿಮಿನಲ್ ಕ್ರಮವನ್ನು ಮೇ ಮೇ 1 ನೇ ವಾರದಲ್ಲಿ ಯೋ ಆರಂಭಿಸಲಾಗಿರುವುದರಿಂದ, ಸದರಿ ಕ್ರಮವನ್ನು ಕೂಡ ರದ್ದುಗೊಳಿಸ ಬೇಕಾಗಿರುವುದೆಂದೂ ವಾದಿಸಲಾಗಿರುತ್ತದೆ.

8. ಐಎ ಯೊಂದಿಗೆ ಅರ್ಜಿದಾರರ ನ್ಯಾಯವಾದಿಗಳು, ಕೇಂದ್ರ ಸರ್ಕಾರವು ಅರ್ಜಿದಾರ ಮೇಲೆ ಯಾವುದೇ ಹೊಣೆಗಾರಿಕೆಯಿರುವುದಿಲ್ಲವೆಂಬ ಆದೇಶವನ್ನು ಹೊರಡಿಸಿರುತ್ತದೆಂದು ವಾದಿಸಿ ಅನುಬಂಧ-ಎಸ್ ಅನ್ನು ಸಲ್ಲಿಸಿರುತ್ತಾರೆ ಹಾಗೂ ಅನುಬಂಧ-ಎಸ್ ನ ಹಿನ್ನಲೆಯಲ್ಲಿ, ಯಾವುದೇ ದಂಡನೀಯ ಕ್ರಮವನ್ನು ಅರ್ಜಿದಾರನ ವಿರುದ್ಧ ಮುಂದುವರೆಸಲಾಗುವುದಿಲ್ಲವೆಂದೂ ಹಾಗೂ ಸರ್ಷಿಯೋರರಿ ಸ್ವರೂಪದಲ್ಲಿನ ರಿಟ್ ಅನ್ನು ಹೊರಡಿಸುವ ಮೂಲಕ ಅನುಬಂಧ-ಕೆ ಯನ್ನು ರದ್ದುಪಡಿಸಿ, ರಿಟ್ ಅರ್ಜಿಯನ್ನು ಪುರಸ್ಕರಿಸುವಂತೆ ಕೂಡ ಈ ನ್ಯಾಯಾಲಯವನ್ನು ನ್ಯಾಯವಾದಿಗಳು ಕೋರಿರುತ್ತಾರೆ.

9. ಇದಕ್ಕೆ ಪ್ರತಿಯಾಗಿ, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ತಮ್ಮ ವಾದ-ವಿವಾದಗಳಲ್ಲಿ, ಅರ್ಜಿದಾರರು ಪ್ರಮಾದವನ್ನು ಎಸಗಿರುವುದರಿಂದ, ಕ್ರಿಮಿನಲ್ ಕ್ರಮವನ್ನು ಈಗಾಗಲೇ ಆರಂಭಿಸಲಾಗಿದೆಯೆಂದು ವಾದಿಸಿರುತ್ತಾರೆ ಹಾಗೂ ಅನುಬಂಧ-ಎಸ್ ಹಿನ್ನಲೆಯಲ್ಲಿ, ಅಭಿಪ್ರಾಯಗಳನ್ನು ನೀಡಬಹುದಾಗಿದ್ದು, ಯಾವುದೇ ದಂಡನೀಯ ಕ್ರಮದ ಅವಶ್ಯಕತೆಯಿದ್ದಲ್ಲಿ ಈ ಸದರಿ ವಿಷಯಕ್ಕೆ ಸ ಂ ಬ ಂ ಧಪಡುವಷ್ಟರ ವಿಷಯವನ್ನು ವಿಲೆಮಾಡಲು ಅವಕಾಶ ನೀಡಬೇಕೆಂದು ಈ ನ್ಯಾಯಾಲಯವನ್ನು ಕೋರಲಾಗಿದೆಯೆಂಬುವಷ್ಟರ ಮಟ್ಟಿಗೆ ಅವಕಾಶ ನೀಡಬಹುದಾಗಿದೆ ಎಂದು ವಾದಮಂಡಿಸಲಾಗಿದೆ.

10. ಅರ್ಜಿದಾರರ ಪರ ಮಾನ್ಯ ವಕೀಲರು ಹಾಗೂ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ಸಲ್ಲಿಸಿದ ಅಹವಾಲನ್ನು ಆಲಿಸಿ, ಈ ನ್ಯಾಯಾಲಯವು ಕೋರಲಾದಂತೆ ಅನುಬಂಧ-ಕೆ ಯನ್ನು ರದ್ದುಪಡಿಸಲು ರಿಟ್ ಅಧಿಕಾರವ್ಯಾಪ್ತಿಯನ್ನು ಚಲಾಯಿಸಬಹುದೆಯೆಂಬುದನ್ನು ಈ ನ್ಯಾಯಾಲಯವು ಪರಿಶೀಲಿಸಬೇಕಾಗಿರುತ್ತದೆ.

11. ಅರ್ಜಿದಾರರ ವಿರುದ್ಧ ಕ್ರಿಮಿನಲ್ ವ್ಯವಹರಣೆಗಳನ್ನು ಆರಂಭಿಸಿರುವುದು ಕಾನೂನುಬಾಹಿರ ಹಾಗೂ ನಿರಂಕುಶವಾಗಿದೆಯೆಂದು ಅರ್ಜಿದಾರರ ಮುಖ್ಯವಾದ ವಾದವಾಗಿದ್ದು, ಅನುಬಂಧ-ಡಿ ಯ 01.03.2013 ರಿಂದ ಆರಂಭವಾಗಿ, 31.05.2013 ರಂದು ಮುಕ್ತಾಯವಾಗುತ್ತದೆಂಬುದೂ ಕೂಡ ಮತ್ತೊಂದು ವಾದವಾಗಿರುತ್ತದೆ.ಹಾಗಾಗಿ, ಈ ಅವಧಿಯೊಳಗೆ, ಲೆವಿ ಹೊಣೆಗಾರಿಕೆಯಿರುವ ಸಕ್ಕರೆಯನ್ನು ಬಿಡುಗಡೆಗೊಳಿಸಬೇಕಾಗಿದ್ದು, ಈ ಅವಧಿ ಪೂರ್ಣಗೊಳ್ಳುವ ಮೊದಲು, ಪ್ರತ್ಯರ್ಜಿದಾರ ಸಂ .1 ಅಧಿನಿಯಮದ 6 (ಎ) ಪ್ರಕರಣದ ಮೇರೆಗೆ ಲೆವಿ ಸಕ್ಕರೆಯನ್ನು ವಶಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಹಾಗೂ ಅಧಿನಿಯಮದ 3 ಹಾಗೂ 7 ನೇ ಪ್ರಕರಣಗಳಡಿಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸುವಂತೆ ಕಾನೂನು ಬಾಹಿರವಾಗಿ ಹಾಗೂ ಉದ್ದೇಶಪೂರ್ವಕವಾಗಿ ಪ್ರತ್ಯರ್ಜಿದಾರ ಸಂ.ತಿನ್ನು ನಿರ್ದೇಶಿಸಿದ್ದರೆಂಬುದು ಅವರ ಮತ್ತೊಂದು ವಾದವಾಗಿರುತ್ತದೆ.ನ್ಯಾಯವಾದಿಗಳು ತಮ್ಮ ವಾದ ಮಂಡನೆಯಲ್ಲಿ, ಪ್ರತ್ಯರ್ಜಿದಾರರುಗಳಿಗೆ ತಮ್ಮ ತಪ್ಪುಗಳು ಅರಿವಾದಾಗ, ಅವರು ವ್ಯವಹರಣೆಗಳನ್ನು ಆರಂಭಿಸಿ ಸ್ಥಗಿತಗೊಳಿಸಿ ಅನುಬಂಧ-ಪಿ ಯನ್ನು ಹೊರಡಿಸಿರುತ್ತಾರೆಂದೂ ವಾದಿಸಿರುತ್ತಾರೆ.ಅನುಬಂಧ-ಜೆ ಯ ಅನುಸರಣೆಯಲ್ಲಿ, ಅರ್ಜಿದಾರರು ದಿನಾಂಕ 14.05.2013 ರ ಪತ್ರವನ್ನು ಬರೆದಿರುತ್ತಾರೆ.ಮುಂದುವರೆದು, 10.04.2013 ರಂದು ಆದೇಶವನ್ನು ಹೊರಡಿಸಿ, ಅನುಬಂಧ-ಡಿ ಯನ್ನು ಅನುಸರಿಸಿ, ತಲುಪಿಸುವ ಹಾಗೂ ರವಾನೆ ಮಾಡುವ ಷರತ್ತುಗಳ ಮೇರೆಗೆ 01.03.2013 ರಿಂದ 31.05.2013 ರವರೆಗಿನ ಅವಧಿಯನ್ನು ಅಂಗೀಕರಿಸಲಾಗಿರುತ್ತದೆಂಬುದು ಸ್ಪಷ್ಟವಾಗಿದ್ದು ಹಾಗಾಗಿ, ಅರ್ಜಿದಾರರ ವಿರುದ್ಧದ ವ್ಯವಹರಣೆಗಳನ್ನು ಆರಂಭಿಸಿರುವುದು ಅಕಾಲಿಕವಾದುದೆಂಬುದು ಸ್ಪಷ್ಟವಾಗಿದೆಯೆಂಬುದನ್ನು ಗಮನಿಸಿಕೊಳ್ಳಬೇಕಾದುದು ಮುಖ್ಯವಾಗಿರುತ್ತದೆ.ಮುಂದುವರೆದು, ಅರ್ಜಿದಾರರ ವಿರುದ್ಧದ ದಂಡನೀಯ ಕ್ರಮವನ್ನು ಆರಂಭಿಸಿರುವ ಅನುಬಂಧ-ಕೆ ಯನ್ನು 31.05.2013 ರ ಅವಧಿ ಮೀರುವ ಮೊದಲು 10.04.2013 ರಂದು ಹೊರಡಿಸಲಾಗಿರುತ್ತದೆ ಹಾಗೂ ಅನುಬಂಧ-ಎಲ್ ದೂರನ್ನು 03.05.2013 ರಂದು ನೀಡಲಾಗಿತ್ತು ಹಾಗೂ ಪ್ರಥಮ ಮಾಹಿತಿ ವರದಿಯನ್ನು ಅನುಬಂಧ-ಎಂ ಮೇರೆಗೆ ನೋಂದಾಯಿಸಲಾಗಿತ್ತು ಹಾಗಾಗಿ, ಅನುಬಂಧ-ಡಿ ಯನ್ನು ಪರಿಗಣನೆಯಲ್ಲಿಟ್ಟುಕೊಂಡು ಅರ್ಜಿದಾರರ ವಿರುದ್ಧ ವ್ಯವಹರಣೆಗಳನ್ನು ಆರಂಭಿಸುವುದು ಅಕಾಲಿಕ ಅಲ್ಲದೆ ಇದು, ಅರ್ಜಿದಾರರ ವಿರುದ್ಧದ ವ್ಯವಹರಣೆಗಳ ಸ್ಥಗಿತಗೊಳಿಸಿ ತರುವಾಯ ಹೊರಡಿಸಿದಂಥ ಅನುಬಂಧ-ಪಿ ಯ ನಿಬಂಧನೆಗಳಲ್ಲಿ ಸಾಕ್ಷ್ಯವಾಗಿರುತ್ತದೆ.ಅದರ ಜೊತೆಗೆ ಪ್ರಸ್ತುತ ಐಎ ಯೊಂದಿಗೆ ಅರ್ಜಿದಾರರು, ಅನುಬಂಧ-ಎಸ್ ದಸ್ತಾವೇಜನ್ನು ಹಾಜರುಪಡಿಸಿದ್ದು, ಅನುಬಂಧ-ಎಸ್ ನ ನಿಬಂಧನೆಗಳಲ್ಲಿ, ಅರ್ಜಿದಾರ-ಕಾರ್ಖಾನೆಯ ಸರಬರಾಜಿನಲ್ಲಿ ಯಾವುದೇ ಬಾಕಿ ಉಳಿಸಿಕೊಂಡಿರುವುದಿಲ್ಲವೆಂಬಂಥ ವಾಸ್ತವಾಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ನಾನು, ಅರ್ಜಿದಾರರ ಕಾರ್ಖಾನೆಯ ಸರ್ಷಿಯೋರರಿ ಸ್ವರೂಪದಲ್ಲಿ ರಿಟ್ ಅನ್ನು ಹೊರಡಿಸುವ ಮೂಲಕ ಕೋರಿದಂತೆ ಅನುಬಂಧ-ಕೆ ಯನ್ನು ರದ್ದುಪಡಿಸಿ, ಭಾರತ ಸಂವಿಧಾನದ 226 ಹಾಗೂ 227 ನೇ ಅನುಚ್ಛೇದಗಳನ್ನು ಅನ್ವಯಿಸಲು ಆಧಾರಾಂಶಗಳನ್ನು ಒದಗಿಸಿಕೊಟ್ಟಿರುತ್ತದೆ ಹಾಗೂ ಅನುಬಂಧ-ಎಲ್, ಅನುಬಂಧ-ಕೆ ಅಲ್ಲದೆ ಅನುಬಂಧ-ಎಂ ಗೆ ತತ್ಪರಿಣಾಮವಾದುದಾಗಿರುತ್ತದೆ.ಇದು ಅನುಬಂಧ-ಕೆ, ಎಲ್ ಹಾಗೂ ಎಂ ಅನ್ನು ರದ್ದುಪಡಿಸಿ ಸರ್ಷಿಯೋರರಿಯ ಸ್ವರೂಪದಲ್ಲಿ ರಿಟ್ ಅನ್ನು ಹೊರಡಿಸಲು ಸಮುಚಿತವಾಗಿರುತ್ತದೆ.ಈಗಾಗಲೇ ಕೈಗೊಂಡಿರುವುದರಿಂದ ಹಾಗೂ ಅನುಬಂಧ-ಎಸ್ ಅನ್ನು ಹೊರಡಿಸಿರುವುದರಿಂದ ಮನವಿಯನ್ನು ಪರಿಗಣಿಸಲು ಅರ್ಜಿದಾರರು ಕೋರಿದ ಇತರೆ ರಿಟ್ ಪರಿಗಣನೆಗೆ ಊರ್ಜಿತವಾಗಿರುವುದಿಲ್ಲ.

12. ದಾಖಲೆ ಮೇಲಿನ ಮುಖ್ಯಾಂಶಗಳನ್ನು ಹಾಗೂ ಮೇಲಿನ ಚರ್ಚೆಯನ್ನು ಗಮನಿಸಿ ಈ ರಿಟ್ ಅರ್ಜಿಯನ್ನು ಈ ಮುಂದಿನ ಆದೇಶವನ್ನು ಹೊರಡಿಸುವ ಮೂಲಕ ವಿಲೆ ಮಾಡಲಾಗಿರುತ್ತದೆ:

i) ರಿಟ್ ಅರ್ಜಿಯನ್ನು ಅಂಗೀಕರಿಸಲಾಗಿರುತ್ತದೆ.

ii) ಅನುಬಂಧ-ಕೆ, ಎಲ್ ಹಾಗೂ ಎಂ ಗಳನ್ನು ರದ್ದುಪಡಿಸಿ ಸರ್ಷಿಯೋರರಿ ರಿಟ್ ಅನ್ನು ಹೊರಡಿಸಲಾಗಿರುತ್ತದೆ.

iii) ಮುಖ್ಯ ಅರ್ಜಿಯ ವಿಲೆಯ ಹಿನ್ನಲೆಯಲ್ಲಿ, ವಾದಕಾಲಿನ ಅರ್ಜಿಗಳು ಇತ್ಯರ್ಥದಲ್ಲಿದ್ದಲ್ಲಿ, ಅವು ಪರಿಗಣನೆಗಾಗಿ ಊರ್ಜಿತವಾಗಿರುವುದಿಲ್ಲ.ಹಾಗಾಗಿ, ಅವುಗಳನ್ನು ಸಹ ವಿಲೆ ಮಾಡಿರುತ್ತೇವೆ.